




## ಕೆಲಸ ಯಾಕೆ ಸಿಗುವುದಿಲ್ಲ?

'ಸುಧಾ' ಮಾ.28ರ ಮುಖಪುಟ ಲೇಖನ 'ಬಿ.ಇ.ಕಲಿತರೆ ಕೆಲಸ ಸಿಗುವುದೇ?' –ಇಲ್ಲ ಎಂಬುದಕ್ಕೆ ಕಾರಣಗಳನ್ನು ಸುಮಂಗಲಾ ಚೆನ್ನಾಗಿ ವಿಶ್ಲೇಷಿಸಿದ್ದಾರೆ.

–ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಬಿ.ಎಸ್.ಸತೀಶ್, ಮೈಸೂರು/ ಪ್ರೊ.ಮಧೂರು ಮೋಹನ ಕಲ್ಲೂರಾಯ, ಗೇರುಕಟ್ಟೆ/ ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಎಸ್.ಶಂಕರ್ ನರಸಿಂಹ, ಬೆಂಗಳೂರು

## ಸಾವಿನ ಜಿಜ್ಞಾಸೆ

'ಸಾವಿನ ಭಯ'ದ ಕುರಿತ ಶಿಕಾಕು ವಿಚಾರ ಲಹರಿ ಚಿಂತನೆಗೆ ಹಚ್ಚುವಂತಿದೆ.

–ಶ್ಯಾಮ ಸುಂದರ, ಬೆಂಗಳೂರು

## ಇದಕ್ಕೆ ಕೊನೆಯಿಲ್ಲವೆ?

ಬದುಕಿನ ಜಟಕಾ ಬಂಡಿಗೆ ಮೂರು ಚಕ್ರದ ಸೈಕಲ್ ಬಳಸುವ ಸ್ಥಿತಿಗೆ (ಚಿತ್ರ ಬರಹ: ನರಂಜನ ವಾನಳ್ಳಿ) ಕೊನೆಯೆಂದು?

–ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ನಿತ್ಯ ಎಸ್., ಮೂಡಬಿದಿರೆ

## ಹಂಸಲೇಖರಿಗೆ ಗೌರವ

ವರನಟ ಡಾ.ರಾಜಕುಮಾರ್ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಹಂಸಲೇಖ ಅವರ ಕುರಿತ ಚ.ಹ.ರಘುನಾಥ ಬರಹ ಬಹಳ ಹಿಡಿಸಿತು.

–ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ/ ಕಾಳೀಹುಂಡಿ ಶಿವಕುಮಾರ್, ಮೈಸೂರು/ ಎಚ್.ಆನಂದಕುಮಾರ್, ಚಿತ್ರದುರ್ಗ

## ದ್ವಂದ್ವಾರ್ಥದ ಹರಿಕಾರ!

ಹಂಸಲೇಖ ಚಿತ್ರಸಂಗೀತದ ದಿಕ್ಕನ್ನೇ ಬದಲಿಸಿದರು, ನಿಜ. ಒಳ್ಳೆಯ ಹಾಡುಗಳ ಜತೆಗೆ– ದ್ವಂದ್ವಾರ್ಥದ ಗೀತೆಗಳನ್ನೂ ಹೆಚ್ಚು ಕೊಟ್ಟ ಮಹಾನುಭಾವರು ಅವರು.

–ಸುಮನಾ, ಹುಂಚ

## ಕಿ.ಮೀ. ಅಲ್ಲ, ಮೀ.

'ದಕ್ಷಿಣದ ಕಾಶ್ಮೀರ' ಕೆಮ್ಮಣ್ಣುಗುಂಡಿ ಕುರಿತ ದಿನೇಶ್ ಪಟವರ್ಧನ್ ಅವರ ಬರಹ ಪ್ರವಾಸಿಗರಿಗೆ ಮಾರ್ಗದರ್ಶಿಯಾದ ಮಾಹಿತಿಯಾಗಿದೆ. ಆದರೆ ಕಲ್ಲತ್ತಗಿರಿ ಜಲಧಾರೆ 150ಕಿ.ಮೀ. ಎತ್ತರದಿಂದ ಧುಮ್ಮಿಕ್ಕುತ್ತದೆ ಎಂಬುದು ತಪ್ಪು, ಅದು 150ಮೀ. ಎಂದು ಇರಬೇಕಿತ್ತು.

–ಪ್ರಭುಪ್ರಸಾದ್ ನಡುತೋಟ, ಶೃಂಗೇರಿ

## ನಾಭಿ ಸೌಂದರ್ಯ ಬೇಕಿತ್ತೆ?

'ನಾಭಿ ಸೌಂದರ್ಯ' ಚಿತ್ರಲೇಖನ ಅಪ್ರಸ್ತುತ, ಸೌಂದರ್ಯದ ನೆಪದಲ್ಲಿ ಅಂಗಾಂಗ ಪ್ರದರ್ಶನದ ಗೀಳಿಗೆ ಪ್ರಚೋದನೆ ನೀಡುವುದಿಲ್ಲವೆ? ದಿನೇಶ್ ಪಟವರ್ಧನ್ ಅವರ ಚಿತ್ರಲೇಖನ ಮನಮೋಹಕವಾಗಿದೆ. 3 ಚಕ್ರದ ಬದುಕು, ಬದುಕಿನ ಸಂಕೀರ್ಣತೆಯನ್ನು ಪ್ರತಿಬಿಂಬಿಸಿದೆ.

'ಗುಡ್ ಬೈ ಇಂಡಿಯಾ' ಕಥೆಯಲ್ಲಿ ದಲಿತ ಬಂಡಾಯದ ಧ್ವನಿ ಇದ್ದರೂ, ನಿರೂಪಣಾ ತಂತ್ರದ ವೈಫಲ್ಯದಿಂದ ಕಥೆಯ ಮಜಾ ಅನುಭವಿಸಲಾಗಲಿಲ್ಲ.

–ಚನ್ನಬಸವ ಪುತ್ತೂರ್ಕರ, ಚಿತ್ರದುರ್ಗ

## ಜಾತಿಯ ತಣ್ಣನೆಯ ಕ್ರೌರ್ಯ

ಎಸ್.ಆರ್.ಗುರುನಾಥ್ ಅವರ 'ಗುಡ್ ಬೈ ಇಂಡಿಯಾ' ಕಥೆ ಪಟ್ಟಣದ ತಣ್ಣನೆಯ ಜಾತೀಯತೆ ಕ್ರೌರ್ಯದಿಂದ ಪಟ್ಟಣದ ಯುವಕರು ಅನುಭವಿಸುವ ಸ್ಥಿತಿಯನ್ನು ಮನೋಜ್ಞವಾಗಿ ಕಟ್ಟಿಕೊಟ್ಟಿದೆ. ಸಾಂಕೇತಿಕ ಚಿತ್ರ ಕಥೆಯ ಅರ್ಥವಂತಿಕೆಯನ್ನು ಹೆಚ್ಚಿಸಿದೆ.

–ತರಂಗಿಣಿ, ತುಮಕೂರು/ ಡಾ.ಕೆ.ವಿ.ಸಂತೋಷ್, ಹೊಳಲ್ಕೆರೆ

## ನಮ್ಮಲ್ಲಿ ಅಷ್ಟಾಗಿ ಇಲ್ಲ

'ಗುಡ್ ಬೈ ಇಂಡಿಯಾ' ಕಥಾ ನಾಯಕನ ದುರವಸ್ಥೆ ಕಂಡು ಮಮ್ಮಲ ಮರುಗಿದೆ. ಆದರೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಂತಹ ಜಾತಿ ಅನಿಷ್ಠ ಹಿಂದೆಯೂ ಅಷ್ಟಾಗಿ ಇರಲಿಲ್ಲ. ಈಗ ಹೇಗೂ ಇಲ್ಲ. ಬಯಲು ಸೀಮೆಯಲ್ಲಿ ಹೇಗೋ ನಾನರಿಯೆ.

–ನೇ.ಗೋ.ಭಟ್ಟ, ಕುಕ್ಕೆ ಸುಬ್ರಹ್ಮಣ್ಯ

## ಆಕರ್ಷಕ ಚಿತ್ರ



'ಎಳೆಯರ ಅಂಗಳ'ದಲ್ಲಿ 'ಮಾಡಿದವರ ಪಾಪ...' ಕಥೆಗೆ ಗಣೇಶ ಅವರ ಚಿತ್ರ ಹಾಗೂ 'ಆನೆ ಬಂತು ಆನೆ!' ಪದ್ಯಕ್ಕೆ ರಘುಪತಿ ಶೃಂಗೇರಿ ಅವರ ಚಿತ್ರಗಳು ಬಹಳ ಚೆನ್ನಾಗಿವೆ.

–ಪತ್ರೇಶಿ, ಹಗರಿ ಬೊಮ್ಮನಹಳ್ಳಿ

## ಸಲಹೆ ಒಳ್ಳೆಯದು, ಆದರೆ...

ಪರೀಕ್ಷೆ ಸಮಯಕ್ಕೆ ಮಕ್ಕಳ ಆರೋಗ್ಯ ಕಾಪಾಡಲು ಡಾ.ವಸುಂಧರಾ ಭೂಪತಿಯವರು ನೀಡಿರುವ ಸಲಹೆಗಳು ಸಮಂಜಸವಾಗಿವೆ. ಆದರೆ ಖರ್ಜೂರ, ಬಾದಾಮಿ, ದ್ರಾಕ್ಷಿ, ಗೋಡಂಬಿ, ಪಾನೀಯ, ಹಣ್ಣುಹಂಪಲು ಮುಂ. ಮಧ್ಯಮವರ್ಗ ಹಾಗೂ ಅವರಿಗಿಂತ ಮೇಲಿನ ಸ್ತರದವರಿಗೆ ಮಾತ್ರ ಎಟುಕಲು ಸಾಧ್ಯ. ಹಳ್ಳಿಗಾಡಿನ ರೈತರು, ನಗರ ಹಾಗೂ ಹಳ್ಳಿಗಾಡಿನ ಬಡವರಿಗೆ ಇವೆಲ್ಲ ಮರೀಚಿಕೆಯೇ. ಹಾಗಾಗಿ ಬಡವರಿಗೆ ಎಟುಕುವ ವಸ್ತುಗಳನ್ನು ಮತ್ತೊಂದು ಲೇಖನದಲ್ಲಿ ಸಲಹೆ ನೀಡಿದರೆ ಒಳ್ಳೆಯದು.

–ಕೊಹಿಮ, ಬಸರಕೋಡು

## ವ್ಯಂಗ್ಯಚಿತ್ರ ವಿಷಾದ

ನಾನು 'ಸುಧಾ' ವಾರಪತ್ರಿಕೆಯನ್ನು ಬಹಳ ವರ್ಷಗಳಿಂದ ಓದುತ್ತಿದ್ದೇನೆ. ಪುಟ 53ರ ಮೂರ್ಖಲೋಕ ವ್ಯಂಗ್ಯಚಿತ್ರದಲ್ಲಿ (ಮಾರ್ಚ್ 28) ವಿಕಲ ಚೇತನ ವ್ಯಕ್ತಿಯನ್ನು ಗೇಲಿ ಮಾಡಿ ಅವಮಾನಿಸಿದ್ದು ನೋಡಿ ನನಗೆ ಆಘಾತವಾಗಿದೆ. ಅಂಗವಿಕಲರು ಸೋಮಾರಿಯಾಗಿ ಕುಳಿತು ಟಿವಿ ನೋಡುತ್ತಾರೆ ಎಂಬ ಅರ್ಥ ಬರುವಂತೆ ಆ ವ್ಯಂಗ್ಯಚಿತ್ರವಿದೆ. ಈ ರೀತಿಯ ವ್ಯಂಗ್ಯಚಿತ್ರಗಳು ಇನ್ನು ಮುಂದೆ ಪ್ರಕಟವಾಗದಂತೆ ಎಚ್ಚರವಹಿಸಿ.

– ಮಂಜುನಾಥ್, ಬೆಂಗಳೂರು.

ಆದ ತಪ್ಪಿಗೆ ವಿಷಾದಿಸುತ್ತೇವೆ.

(ಸಂ)


॥ ಶ್ರೀ ಸಿದ್ಧಿ ವಿನಾಯಕ ಪ್ರಸನ್ನ॥

ಕೇರಳದ ಪ್ರಸಿದ್ಧ ಮಾಂತ್ರಿಕ ಜ್ಯೋತಿಷ್ಯರು ಪಂ. ಪೊದುವಾಳ್ ಎಸ್. ಕುಮಾರನ್



ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಪರಮ ಭಕ್ತರಾದ ಇವರು ನಿಮ್ಮ ಭವಿಷ್ಯವನ್ನು ನಿಖರವಾಗಿ ತಿಳಿಸುತ್ತಾರೆ. ವಾಹನ ಯೋಗ, ಸ್ತ್ರೀ-ಪುರುಷ ವಶೀಕರಣ, ಧನಯೋಗ, ವೈರಿಗಳಿಂದ ರಕ್ಷಣೆ, ಕೋರ್ಟ್, ಕಛೇರಿ, ಭೂಮಿ, ಮನೆ ಕೆಲಸಗಳು, ಸತಿ-ಪತಿ ಕಲಹ, ಸಂತಾನ ದೋಷ, ಮರಣ ಭಯ, ಮಾನಸಿಕ ಚಿಂತೆ, ಇನ್ನೂ ಅನೇಕ ನಿಮ್ಮ ಗುಪ್ತ ಸಮಸ್ಯೆಗಳಿಗೆ ಶೀಘ್ರ ಪರಿಹಾರವಿದೆ.

ಇಲ್ಲಿಯವರೆಗೂ ತಾವು ಎಷ್ಟೋ ಜ್ಯೋತಿಷ್ಯರಲ್ಲಿ ಹಾಗೂ ದೇವಿ ಭೂತಗಳಲ್ಲಿ ಕೇಳಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ಸಿಗದೇ ಇದ್ದಲ್ಲಿ ಅಂತಹ ಯಾವುದೇ ಕಠಿಣ ಸಮಸ್ಯೆಗಳಿಗೆ ಕೇರಳದ ಮಲಯಾಳಿ ಶ್ರೀ ಕುಟ್ಟಿಚ್ಚಾತನ್ ಮಂತ್ರಶಕ್ತಿಯಿಂದ ಹಾಗೂ ಶಾಸ್ತ್ರೋಕ್ತ ಪದ್ಧತಿಯಿಂದ ಕೇವಲ 11 ದಿನದಲ್ಲಿ ಪರಿಹಾರವಿದೆ

ನಮ್ಮಲ್ಲಿ ಕೇಳುವ ಯಾವುದೇ ಸಮಸ್ಯೆಗಳನ್ನು ಗುಪ್ತವಾಗಿ ಇಡಲಾಗುವುದು. ದೂರವಾಣಿ ಹಾಗೂ ಪತ್ರದ ಮುಖಾಂತರ ವಿವರಗಳನ್ನು ಪಡೆಯಬಹುದು.

ವಿ.ಸೂ.: ಸತಿ–ಪತಿ ಕಲಹ, ಸವತಿಯಕಾಟ, ಸ್ತ್ರೀ–ಪುರುಷ ವಶೀಕರಣಕ್ಕೆ ಗಂಧರ್ವ ಸಮ್ಮೋಹಿನಿ ಯಂತ್ರ ಮಾಡಿಕೊಡುತ್ತಾರೆ.

ವಿಳಾಸ: ಕೇರಳದ ಜ್ಯೋತಿಷ್ಯರು, ಪಂ ಪೊದುವಾಳ್ ಎಸ್. ಕುಮಾರನ್ ಕರ್ನಾಟಕ ಬ್ಯಾಂಕ್ ಹಿಂಭಾಗ, ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ಹತ್ತಿರ (ಮನೆ), ಹೊಸಪೇಟೆ, ಬಳ್ಳಾರಿ ಜಿಲ್ಲೆ. ಪಿನ್ ಕೋಡ್- 583201

ಮೊಬೈಲ್ 9880956386

ಪ್ರತಿ ತಿಂಗಳು ದಿನಾಂಕ: 09 ಮತ್ತು 10 ರಂದು ಬೆಂಗಳೂರಿನಲ್ಲಿಯೂ ಸಂಪರ್ಕಿಸಬಹುದು. ಭೇಟಿಗಾಗಿ ಮೊದಲು ಕರೆಮಾಡಿ